# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 469 (591)
ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 14.08.2025
ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಅ)</td><td>ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ 524 ರಿಂದ 524.246 ಮೀಟರ್‌ವರೆಗೆ ಎತ್ತರಿಸುವ ಸಲುವಾಗಿ ಎಷ್ಟು ಗ್ರಾಮಗಳನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಗ್ರಾಮಗಳನ್ನು ನಿಗಧಿಪಡಿಸಿದೆ: (ಗ್ರಾಮಗಳ ಹೆಸರುಗಳು ಪಟ್ಟಿಯನ್ನು ಸಂಪೂರ್ಣ ನೀಡುವುದು)</td><td>ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರ ಅನುಷ್ಠಾನದಿಂದಾಗಿ ಆಲಮಟ್ಟಿ ಅಣೆಕಟ್ಟಿನ ಗೇಟಿನ ಎತ್ತರವನ್ನು 519.600 ರಿಂದ 524.256 ಮೀಟರ್ ವರೆಗೆ ಎತ್ತರಿಸಿದಾಗ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ 20 ಗ್ರಾಮಗಳನ್ನು ಸ್ವಾಧೀನಪಡಿಸಿಕೊಳ್ಳಲು ಯೋಜಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ :
<table>
<tr><th>ಕ್ರ ಸಂ.</th><th>ಮುಳುಗಡೆಯಾಗುವ ಗ್ರಾಮಗಳ ಹೆಸರು</th><th>ಕ್ರ ಸಂ.</th><th>ಮುಳುಗಡೆಯಾಗುವ ಗ್ರಾಮಗಳ ಹೆಸರು</th></tr>
<tr><td>1</td><td>ಶಿರಬೂರ</td><td>11</td><td>ಬುದ್ನಿ. ಬಿ.ಕೆ.</td></tr>
<tr><td>2</td><td>ಚಿಕ್ಕಗಲಗಲಿ</td><td>12</td><td>ಸನಾಳ</td></tr>
<tr><td>3</td><td>ಅಂಕಲಗಿ</td><td>13</td><td>ಆಲಗುಂಡಿ. ಬಿ.ಕೆ.</td></tr>
<tr><td>4</td><td>ಉದಗಟ್ಟಿ</td><td>14</td><td>ಹಿರೇಪಡಸಲಗಿ</td></tr>
<tr><td>5</td><td>ಕೊಪ್ಪ ಎಸ್. ಕೆ.</td><td>15</td><td>ಕುಂಬಾರಹಳ್ಳ</td></tr>
<tr><td>6</td><td>ಕುಂದರಗಿ</td><td>16</td><td>ಹಿರೇಸಂಶಿ</td></tr>
<tr><td>7</td><td>ಬಾವಲತ್ತಿ</td><td>17</td><td>ಗೋವಿಂದಕೊಪ್ಪ</td></tr>
<tr><td>8</td><td>ಚಿಕ್ಕೂರ</td><td>18</td><td>ವಂದಾಲ</td></tr>
<tr><td>9</td><td>ಮಾಚಕನೂರ</td><td>19</td><td>ಕಾತರಕಿ</td></tr>
<tr><td>10</td><td>ಬಂಟನೂರ</td><td>20</td><td>ಗದ್ದನಕೇರಿ</td></tr>
</table></td></tr>
<tr><td>(ಆ)</td><td>ಈ ಪುನರ್ವಸತಿ ಕೇಂದ್ರಗಳಿಗೆ ಭೂಸ್ವಾಧೀನ ಪ್ರಕ್ರಿಯೆ (ಆರ್&ಆರ್) ನೂತನವಾಗಿ ಪುನರ್ವವಸತಿ ಪುನರ್ ನಿಯಮಗಳ ಸ್ಥಾಪನೆಗಾಗಿ ಭೂ ಸ್ವಾಧೀನ ಪ್ರಕ್ರಿಯೆಯು ಯಾವ ಹಂತದಲ್ಲಿದೆ: ಎಷ್ಟು ಕ್ಷೇತ್ರ ಜಮೀನು ಒಳಪಟ್ಟಿದೆ ಹಾಗೂ ಎಷ್ಟು ಕ್ಷೇತ್ರಕ್ಕೆ ಭೂ ಪರಿಹಾರ ಒದಗಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) ಮತ್ತು ಇನ್ನು ಭೂ ಪರಿಹಾರ ಕೊಡಬೇಕಾಗಿರುವ ಕ್ಷೇತ್ರ ಎಷ್ಟು; ಬಾಕಿ ಪರಿಹಾರದ ಕುರಿತು ಮಾಹಿತಿ ನೀಡುವುದು;</td><td>ಮುಳುಗಡೆ ಹೊಂದಲಿರುವ 20 ಗ್ರಾಮಗಳ ಪುನರ್ವಸತಿಗಾಗಿ 24 ಪುನರ್ವಸತಿ ಕೇಂದ್ರಗಳನ್ನು ಗುರುತಿಸಲಾಗಿದ್ದು, ಇದಕ್ಕಾಗಿ 4,633ಎ-31ಗುಂ. ಕ್ಷೇತ್ರವನ್ನು ಭೂಸ್ವಾಧೀನಕ್ಕೆ ಒಳಪಡಿಸಬೇಕಾಗಿರುತ್ತದೆ.<br><br>ಈ ಪೈಕಿ 1847 ಎಕರೆ ಕ್ಷೇತ್ರವನ್ನು ಭೂಸ್ವಾಧೀನಪಡಿಸಿಕೊಂಡು ಭೂಪರಿಹಾರ ವಿತರಿಸಲಾಗಿರುತ್ತದೆ.<br><br>ಇನ್ನೂ 2,787 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು, ಐತೀರ್ಪು ರಚಿಸುವ ಹಂತದಲ್ಲಿ ಕಲಂ 11(1)ರ ಅಧಿಸೂಚನೆ ಪೂರ್ವದ 03 ವರ್ಷಗಳ ಮಾರಾಟದ ಸರಾಸರಿ ಅಂಕಿ-ಅಂಶ ಮತ್ತು ಮಾರ್ಗಸೂಚಿ ದರಗಳನ್ನು ಉಪ ನೋಂದಣಾಧಿಕಾರಿಗಳಿಂದ ಪಡೆದು, ಯಾವುದು ಹೆಚ್ಚು ಅದನ್ನು ಪರಿಗಣಿಸಿ ಭೂಪರಿಹಾರದ ಮೊತ್ತವನ್ನು ಲೆಕ್ಕಾಚಾರ ಮಾಡಿ ಪರಿಹಾರದ ಮೊತ್ತವನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.</td></tr>
</table>

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಇ) | 524 ಮೀಟರ್ ಎತ್ತರವನ್ನು ಹೆಚ್ಚುವರಿಯಾಗಿ 524.256 ಮೀಟರ್‌ಗೆ ಎತ್ತರಿಸಿದಾಗ ಮುಳುಗುವ ಗ್ರಾಮಗಳಿಗೆ ಅಲ್ಲಿರುವ ಮನೆಗಳಿಗೆ, ಕಟ್ಟಡಗಳಿಗೆ ಭೂ ಪರಿಹಾರವನ್ನು ಒದಗಿಸಲಾಗಿದೆಯೇ:<br>ಒದಗಿಸದಿದ್ದರೆ ಎಷ್ಟು ಕಟ್ಟಡಗಳಿಗೆ ಒದಗಿಸಲಾಗಿದೆ: ಉಳಿದ ಕಟ್ಟಡ, ಮನೆಗಳಿಗೆ ಯಾವಾಗ ಒದಗಿಸಲಾಗುವುದು: | ಹಂತ-3ರ ಅನುಷ್ಠಾನದಲ್ಲಿ ಮುಳುಗಡೆ ಹೊಂದಲಿರುವ 20 ಗ್ರಾಮಗಳಲ್ಲಿ ಒಟ್ಟು 23,330 ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲು ಗುರುತಿಸಲಾಗಿದ್ದು, ಈ ಪೈಕಿ 577 ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡು ರೂ.43.09 ಕೋಟಿ ಭೂಪರಿಹಾರ ಒದಗಿಸಲಾಗಿರುತ್ತದೆ.<br><br>ಬಾಕಿ ಉಳಿದ 22,764 ಕಟ್ಟಡಗಳ ಸ್ವಾಧೀನ ಪ್ರಕ್ರಿಯೆ ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. |
| (ಈ) | ಬಾಗಲಕೋಟೆ ಮೂರನೇ ಹಂತಕ್ಕೆ ಮುಳುಗಡೆಯಾಗುವ ಒಟ್ಟು ಪ್ರದೇಶಗಳ ಕಟ್ಟಡಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ: ಬಾಕಿ ಉಳಿಸಿಕೊಂಡಿರುವ ಭೂ ಪರಿಹಾರವನ್ನು ಯಾವ ಕಾಲಮಿತಿಯೊಳಗೆ ನೀಡಲಾಗುತ್ತದೆ? (ಸ್ಪಷ್ಟ ಮಾಹಿತಿ ಮತ್ತು ವರದಿಯನ್ನು ನೀಡುವುದು) | ಕೃ.ಮೇ.ಯೋ ಆರ್.ಎಲ್. ಹಂತ-3ರ ಅನುಷ್ಠಾನದಲ್ಲಿ ಮುಳುಗಡೆ ಹೊಂದಲಿರುವ **(ಆರ್.ಎಲ್.521-525 ಮೀ.)** ಬಾಗಲಕೋಟೆ ನಗರದ ಒಟ್ಟು 6,733 ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡು ರೂ.907.84 ಕೋಟಿ ಭೂಪರಿಹಾರ ಒದಗಿಸಲಾಗಿರುತ್ತದೆ. ಬಾಕಿ ಉಳಿದಿರುವ ರೂ.41.07 ಕೋಟಿ ಮೊತ್ತದ ಪರಿಹಾರವನ್ನು ಅನುದಾನದ ಲಭ್ಯತೆಯ ಅನುಸಾರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.<br><br>ಆರ್.ಎಲ್. 521-523 ಮೀಟರ್‌ವರೆಗೆ : 4,403 ಕಟ್ಟಡಗಳು<br>ಆರ್.ಎಲ್. 523-525 ಮೀಟರ್‌ವರೆಗೆ : 2,330 ಕಟ್ಟಡಗಳು<br>**ಒಟ್ಟು : 6,733 ಕಟ್ಟಡಗಳು** |

ಸಂಖ್ಯೆ:ಜಸಂಇ 09 ಡಬ್ಲ್ಯೂಬಿಎಂ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು